# ಮಿರರ್ ಮ್ಯಾಜಿಕ್



**ಸೀರೆ, ಸಲ್ವಾರ್, ಕುರ್ತಾ, ಲೆಹಂಗಾಗಳ ಮೇಲೆ ಕನ್ನಡಿ ಅಳವಡಿಸಿದ ಉಡುಪು ಈಗಿನ ಫ್ಯಾಷನ್ ಟ್ರೆಂಡ್. ಸೆಲೆಬ್ರಿಟಿಗಳಿಂದ ಹಿಡಿದು ಸಾಮಾನ್ಯ ಮಹಿಳೆಯರವರೆಗೂ ಈ ಕನ್ನಡಿ ವ್ಯಾಮೋಹ ವ್ಯಾಪಿಸಿದೆ.**

**■ ಆಶಾ ಎಸ್. ಕುಲಕರ್ಣಿ**

ಫಳಫಳನೇ ಮಿನುಗುವ ಕನ್ನಡಿಗಳ ಅಂದಕ್ಕೆ ಮನಸೋಲದವರಿಲ್ಲ. ಇಂದಿನ ಆಧುನಿಕ ಯುಗದಲ್ಲಿ ದೇಸಿ ಫ್ಯಾಷನ್ನಿನ ಹೊಳಪನ್ನು ಕಾಣಬಹುದು. ಅದು ನಾವು ಧರಿಸುವ ಡ್ರೆಸ್ ಆಗಿರಬಹುದು, ಇಲ್ಲವೇ ಸೀರೆ ಆಗಿರಬಹುದು ಇಲ್ಲವೇ ಇನ್ನಿತರ ಆಕ್ಸೆಸರೀಸ್ ಆಗಿರಬಹುದು. ಈಗ ಎಲ್ಲಿ ನೋಡಿದರೂ ಈ ಕನ್ನಡಿಗಳದ್ದೇ ಕಾರುಬಾರು. ಇದು ಇಂದಿನ ಫ್ಯಾಷನ್ ಕೂಡ.

ಸಾಮಾನ್ಯವಾಗಿ ಸೀರೆ, ಸಲ್ವಾರ್ ಕಮೀಜ್, ಟಾಪ್ಸ್, ಕುರ್ತಾ, ಗಾಗ್ರಾ, ಲೆಹಂಗಾ ಇತ್ಯಾದಿಗಳಲ್ಲಿ ಕನ್ನಡಿಯಿಂದ ಡಿಸೈನ್ ಮಾಡಿದ ಡ್ರೆಸ್‌ಗಳನ್ನು ಮಹಿಳೆಯರು ಬಹಳ ಇಷ್ಟಪಟ್ಟು ಧರಿಸುತ್ತಾರೆ. ಉಡುಪುಗಳ ಮೇಲೆ ಯಾವುದೇ ವಿನ್ಯಾಸದ ಎಂಬ್ರಾಯಿಡರಿ ಮಾಡಿದರೂ ಅದರಲ್ಲಿ ಕನ್ನಡಿಗಳನ್ನು ಅಳವಡಿಸಿದ್ದರೆ ನೋಡಲು ಚಂದ. ಇನ್ನು ಕೆಲವರು ವಿಶೇಷವಾಗಿ ಬರೀ ಕನ್ನಡಿಯ ಡಿಸೈನ್‌ಗಳೇ ಇರುವ ಉಡುಪುಗಳನ್ನು ಆಯ್ಕೆ ಮಾಡುತ್ತಾರೆ. ಈ ಕನ್ನಡಿಯ ವಿಶೇಷವೇನೆಂದರೆ ಬೆಳಕು ಬಿದ್ದಾಗ ಮಿರ ಮಿರ ಹೊಳೆಯುವುದು. ಇದು ಎಂಥವರನ್ನೂ ತನ್ನೆಡೆಗೆ ಸೆಳೆಯುತ್ತದೆ.

ಇತಿಹಾಸದ ಪ್ರಕಾರ ಮೊಗಲರ ಕಾಲದಲ್ಲಿ ಪರ್ಷಿಯಾ ದೇಶದಿಂದ ಈ ಕನ್ನಡಿಗಳ ಡಿಸೈನ್ ನಮ್ಮ ದೇಶಕ್ಕೆ ಬಂದಿವೆ. ಉತ್ತರ ಭಾರತದ ಗುಜರಾತಿನ ಕಚ್ ಮತ್ತು ಬುಜ್ ಪ್ರಾಂತಗಳಲ್ಲಿ ಹ್ಯಾಂಡ್ ಎಂಬ್ರಾಯಿಡರಿಗೆ ವಿಶೇಷ ಸ್ಥಾನಮಾನ. ಇಲ್ಲಿ ಕೈಯಿಂದ ಹೊಲಿಯುವ ಎಂಬ್ರಾಯಿಡರಿಗೆ ಕಚ್ ವರ್ಕ್ ಎಂಬ್ರಾಯಿಡರಿ ಎಂದೇ ಕರೆಯಲಾಗುತ್ತದೆ. ಈ ಕಚ್ ವರ್ಕ್ ಎಂಬ್ರಾಯಿಡರಿ ಎಂದರೆ ರೇಖಾ ಗಣಿತದಂತೆ ಕೆಲವೊಂದು ಡಿಸೈನ್‌ಗಳನ್ನು ಬಟ್ಟೆಯ ಮೇಲೆ ಹೊಲಿದು ಅದರ ಮಧ್ಯದಲ್ಲಿ ಕನ್ನಡಿಯನ್ನು ಅಂದವಾಗಿ ಕೂರಿಸಿ ವೈವಿಧ್ಯಮಯವಾಗಿ ಹೊಲಿಯುವುದೇ ಈ ಪ್ರಾಂತದ ವೈಶಿಷ್ಟ್ಯ. ಬಣ್ಣ ಬಣ್ಣದ ದಾರಗಳಲ್ಲೇ ಈ ಕನ್ನಡಿಗಳನ್ನಿಟ್ಟು ವಿವಿಧ ವಿನ್ಯಾಸದಲ್ಲಿ ಹೊಲಿಯುತ್ತಾರೆ.

ನಮ್ಮ ದೇಶದಲ್ಲಿ ಗುಜರಾತ್, ರಾಜಸ್ತಾನ್, ಹರಿಯಾಣ, ದಿಲ್ಲಿ, ಮಧ್ಯಪ್ರದೇಶ, ಬಿಹಾರ, ಕರ್ನಾಟಕ, ಆಂಧ್ರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಈ ಕನ್ನಡಿಗಳನ್ನು ಅಳವಡಿಸಿದ ಉಡುಪುಗಳು ಇನ್ನೂ ಬಳಕೆಯಲ್ಲಿವೆ. ಅಲ್ಲದೆ ಫ್ಯಾಷನೆಬಲ್ ಆಗಿ ಗಮನಸೆಳೆಯುತ್ತಿದೆ. ಆಯಾ ಪ್ರಾಂತದಲ್ಲಿ ಸಿಗುವ ವಿವಿಧ ಆಕಾರದ ತಗಡು, ಬೆಳ್ಳಿ ನಾಣ್ಯಗಳು, ಹೊಳೆಯುವ ಸೀಕ್ವೆನ್ಸ್‌ಗಳು, ಪುಟ್ಟದಾದ ತೂಕವಿಲ್ಲದ ಕನ್ನಡಿಗಳು ಹೀಗೆ ನಾನಾ ವಿಧದ ಅಲಂಕಾರಿಕ ಸಾಮಗ್ರಿಗಳನ್ನು ಅಳವಡಿಸಿ ಅದರ ಸುತ್ತಲೂ ವಿಶಿಷ್ಟ ವಿನ್ಯಾಸದ ಡಿಸೈನ್ ಮಾಡುವ ಸಂಪ್ರದಾಯವೂ ಕೂಡ ಇನ್ನುವರೆಗೆ ಚಾಲ್ತಿಯಲ್ಲಿದೆ.

ಇತ್ತೀಚೆಗೆ ಮಾರುಕಟ್ಟೆಯಲ್ಲಿ ಕಾಣಸುತ್ತಿರುವ ಕನ್ನಡಿ ಅಳವಡಿಸಿರುವ ಉಡುಪುಗಳು ದಪ್ಪ ಕನ್ನಡಿಯಿಂದ ತಯಾರಿಸಿದ ಉಡುಪುಗಳು ಎಂದು ಹೇಳಲಾಗುವುದಿಲ್ಲ. ಕನ್ನಡಿಯ ಆಕಾರದಲ್ಲಿಯೇ ಇರುವ ಹಗುರವಾದ ಸೀಕ್ವೆನ್ಸ್ ಪ್ಲೇಟ್‌ಗಳನ್ನು ಇಟ್ಟು ಮಿನುಗುವಂತೆ ಹೊಲಿಯುತ್ತಾರೆ. ಈ ತರಹದ ಉಡುಪುಗಳು ಬರೀ ನೋಡಲು ಮಾತ್ರ ಚೆನ್ನಾಗಿಯೇ ಕಾಣುತ್ತವೆ; ಆದರೆ ಕನ್ನಡಿಯ ವಿಶೇಷತೆ ಇದಕ್ಕೆ ಇರುವುದಿಲ್ಲ. ಕನ್ನಡಿಯನ್ನು ಮಧ್ಯದಲ್ಲಿರಿಸಿ ಸುತ್ತಲೂ ಬಣ್ಣ ಬಣ್ಣದ ದಾರಗಳಿಂದ ಹೊಲಿದರೆ ಕನ್ನಡಿಯ ಬೆಳಕು ಮತ್ತು ಸೂರ್ಯನ ಬಿಸಿಲಿಗೆ ಫಳ ಫಳನೇ ಮಿಂಚಿ, ಪ್ರತಿಬಿಂಬ ಆಕರ್ಷಕವಾಗಿರುತ್ತದೆ.

ಇನ್ನು ಕನ್ನಡಿ ಅಳವಡಿಸಿ ಹೊಲೆಯುವ ಡಿಸೈನ್‌ಗಳಿಗೆ ವ್ಯವಧಾನ, ತಾಳ್ಮೆ ಜೊತೆಗೆ ಕೈಚಳಕದ ಅವಶ್ಯಕತೆಯೂ ಇದೆ. ಕನ್ನಡಿಯನ್ನು ಅಳವಡಿಸುವ ಹೊಲಿಗೆಗಳಲ್ಲಿ ವಿನ್ಯಾಸಗಾರರು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಬಂದಿದ್ದಾರೆ. ಸಾಮಾನ್ಯವಾಗಿ ಕೈ ಹೊಲಿಗೆ, ಸ್ಯಾಟೀನ್ ಸ್ಟಿಚ್, ಬ್ಲಾಂಕೆಟ್ ಸ್ಟಿಚ್, ಹೇರಿಂಗ್ ಸ್ಟಿಚ್ ಮುಂತಾದ ಹೊಲಿಗೆಗಳನ್ನು ಬಳಸುತ್ತಿದ್ದಾರೆ.

ಈಗಿನ ಹೊಸ ಟ್ರೆಂಡ್ ಅಂದರೆ ಕನ್ನಡಿಯನ್ನು ಬಟ್ಟೆಗಳಿಗೆ ಅಂಟಿಸುವ ಆಧುನಿಕ ಪದ್ಧತಿಯನ್ನು ಅನುಸರಿಸುವುದು. ಮಾರುಕಟ್ಟೆಯಲ್ಲಿ ಸಿಗುವ ವಿವಿಧ ವಿನ್ಯಾಸದ ಕನ್ನಡಿಗಳನ್ನು ತಂದು ತಮ್ಮ ಉಡುಪುಗಳಿಗೆ ತಕ್ಕಂತೆ ವಿನ್ಯಾಸ ಮಾಡಿ ಗಮ್ ಮೂಲಕ ಸುಂದರವಾಗಿ ಅಂಟಿಸಿ ಧರಿಸಬಹುದು. ಇದು ಅತ್ಯಂತ ಸುಲಭದ ಕೆಲಸವೂ ಹೌದು. ಇನ್ನು ಸಭೆ, ಸಮಾರಂಭಗಳಿಗೆ ಹೋಗುವಾಗ ಸಿಂಪಲ್ಲಾಗಿರುವ ಸೀರೆ ಧರಿಸಿ ಅದರ ಮೇಲೆ ಕನ್ನಡಿ ಅಳವಡಿಸಿದ ಬ್ಲೌಸ್ ಧರಿಸಿದರೆ ಅದು ನಿಮಗೆ ಗ್ರಾಂಡ್ ಲುಕ್ ಸಿಗುವಂತೆ ಮಾಡುತ್ತದೆ ಅಲ್ಲದೇ ಎಲ್ಲರಲ್ಲೂ ಎದ್ದು ಕಾಣುವ ವ್ಯಕ್ತಿತ್ವ ನಿಮ್ಮದಾಗುತ್ತದೆ. ಸಿನಿಮಾ ತಾರೆಯರಿಂದ ಹಿಡಿದು ರ್‍ಯಾಂಪ್ ಮೇಲೆ ಹೆಜ್ಜೆ ಹಾಕುವ ಮಾಡೆಲ್‌ಗಳೂ ಕೂಡ ಈ 'ಮಿರರ್ ಮ್ಯಾಜಿಕ್'ಗೆ ಮನಸೋತು ಇವುಗಳಿರುವ ಉಡುಪುಗಳನ್ನೇ ಧರಿಸಿ ಮಿಂಚುತ್ತಿದ್ದಾರೆ.

ಈ ಮಿರರ್ ಮ್ಯಾಜಿಕ್‌ಗೆ ಕಾಲದ ಸಂಬಂಧವೇ ಇಲ್ಲ. ಅಜ್ಜಿ, ಮುತ್ತಜ್ಜಿಯರ ಕಾಲದಿಂದ ಇಂದಿನ ಆಧುನಿಕ ಮನೋಭಾವದ ಯುವತಿಯರವರೆಗೂ ಮಿರರ್ ವರ್ಕ್ ಎಂಬ್ರಾಯಿಡರಿ ಎವರ್ ಗ್ರೀನ್ ಫ್ಯಾಷನ್ ಆಗಿ ರಾರಾಜಿಸುತ್ತಿದೆ. ಅತ್ತ ಸಂಪ್ರದಾಯಕ್ಕೂ ಸೈ, ಇತ್ತ ಆಧುನಿಕತೆಗೂ ಸೈ ಎನ್ನುವ ರೀತಿಯಲ್ಲಿ ಈ ಮಿರರ್ ಮ್ಯಾಜಿಕ್ ರೂಪುಗೊಂಡಿರುವುದಂತೂ ನಿಜ. ಬರೀ ಸಂಪ್ರದಾಯಸ್ಥ ಉಡುಪುಗಳಾದ ಸೀರೆ, ಗಾಗ್ರಾ, ಲೆಹಂಗಾಗಳಿಗೆ ಮಾತ್ರವಲ್ಲ, ಇದೀಗ ಜೀನ್ಸ್ ಪ್ಯಾಂಟ್ ಮೇಲೆ ಧರಿಸುವ ಶಾರ್ಟ್ ಕುರ್ತಾ, ಲಾಂಗ್ ಕುರ್ತಾ, ಟಾಪ್ಸ್.. ಹೀಗೆ ಇನ್ನಿತರ ಆಧುನಿಕ ಉಡುಪುಗಳ ಮೇಲೂ ಈಗ ಕನ್ನಡಿಗಳು ರಾರಾಜಿಸುತ್ತಿವೆ. ಇವಿಷ್ಟು ಸಾಲದು ಎಂಬಂತೆ ಮಹಿಳೆಯರ ಮೊಬೈಲ್ ಪೌಚ್‌ಗಳು, ಬ್ಯಾಗ್‌ಗಳು, ಪರ್ಸ್‌ಗಳು, ಹೇರ್ ಬ್ಯಾಂಡ್‌ಗಳು, ಚಪ್ಪಲಿಗಳು ಎಲ್ಲದರ ಮೇಲೂ ಕನ್ನಡಿಗಳ ಮಿಂಚು ಇದೆ. ಇನ್ನು ಗೃಹಾಲಂಕಾರದಲ್ಲಿಯೂ ಕನ್ನಡಿಗಳನ್ನು ಬಳಸಲಾಗುತ್ತಿದೆ. ಕನ್ನಡಿಗಳಿಂದ ವಾಲ್ ಹ್ಯಾಂಗಿಂಗ್ಸ್ ಇನ್ನಿತರ ಅಲಂಕಾರಿಕ ವಸ್ತುಗಳನ್ನು ತಯಾರಿಸುವುದೂ ಇದೆ. ■